# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ

# ಯೇಸುವು ಕುರುಡನನ್ನು ಗುಣ ಪಡಿಸಿದ್ದು



ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen

60ರ 50ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*

ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಕನ್ನಡ

Kannada

ಯೆರಿಕೋ ಹತ್ತಿರ ರಸ್ತೆಯ ಬದಿಯಲ್ಲಿ ಕುರುಡನಾದ ಬಾರ್ತಿಮಯನು ಕುಳಿತ್ತಿದ್ದನು. ಆತನು ಕುರುಡನಾಗಿದ್ದರಿಂದ ಅವನು ಕೆಲಸವನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲ.



1

ಆದುದ್ದರಿಂದ ಅವನು ಭಿಕ್ಷೆಯನ್ನು ಬೇಡುತ್ತಿದ್ದನು. ರಸ್ತೆಯಲ್ಲಿ ಹೋಗುವವರು ಅವನಿಗೆ ಏನಾದರು ಕೊಡುತ್ತಿದ್ದರು.



2

ಒಂದು ದಿನ ದಾರಿಯಲ್ಲಿ ಆನೇಕರು ನಡೆದಾಡುವಂತ ಶಬ್ದವನ್ನು ಬಾರ್ತಿಮಯನು ಕೇಳಿಸಿಕೊಂಡನು, ಅದು ಅಪರೂಪವಾದ ಶಬ್ದವಾಗಿತ್ತು ಆದು ಏನೆಂದು ಆ ಕುರುಡನು ತಿಳಿದುಕೊಂಡನು.



3

ಅದೇನೆಂದರೆ, ನಜರೇತಿನ ಯೇಸುವು ಆ ಮಾರ್ಗದಲ್ಲಿ ಹೋಗುತ್ತಿದ್ದನು. ಆತನನ್ನು ನೋಡುವುದಕ್ಕೂ ಮತ್ತು ಆತನ ಮಾತನ್ನು ಕೇಳುವುದಕ್ಕೂ ಜನರು ಆತನ ಹಿಂದೆ ಹೋಗುತ್ತಿದ್ದರು.



4



ಯೇಸುವೇ ದಾವೀದ ಕುಮಾರನೇ ನನ್ನನ್ನು ಕರುಣಿಸು ಎಂದು ಬಾರ್ತಿಮಯನು ಕೂಗಿದನು, ಏಕೆ ಅವನು ಹಾಗೆ ಕೂಗಿದನು? ಅವನಿಂದ ಏನಾದರೂ ಸಹಾಯವನ್ನು ಬಯಸಿದ್ದರಿಂದಲೋ?

5



ಒಂದುವೇಳೆ ಆತನು ಆದ್ಭುತವನ್ನು ಮಾಡಿದ್ದು ಕೇಳಿದ್ದರಿಂದ ಆ ರೀತಿಯಾಗಿ ಕೂಗಿರಬಹುದು. ಮತ್ತು ಪುನ: ಯೇಸುವೇ ದಾವೀದ ಕುಮಾರನೇ ನನ್ನನ್ನು ಕರುಣಿಸು ಎಂದು ಬಾರ್ತಿಮಯನು ಕೂಗಿದನು. ಆ ಕೂಗಿನಲ್ಲಿ ನಿರೀಕ್ಷೆಯು ಕಾಣಲ್ಪಡುತ್ತಿತ್ತು.

6



ಬಾರ್ತಿಮಯನು ಒಂದು ಸತ್ಯವನ್ನು ತಿಳಿದುಕೊಂಡಿದ್ದನು ಆದೇನೆಂದರೆ ಈಗ ನಾನು ಅವನಿಂದ ಸಹಾಯವನ್ನು ಕಾಣದಿದ್ದರೆ ಎಂದಿಗೂ ಕಾಣಲಾರೆ ಎಂದು, ಮತ್ತೆ ಯೇಸುವು ಆ ಮಾರ್ಗದಲ್ಲಿ ಹೋಗಲಾರನೆಂದು ಆತನು ತಿಳಿದ್ದಿದನು.

7



ಬಾರ್ತಿಮಯನು ಯೇಸುವಿನ ಹತ್ತಿರ ಹೋಗಲು ಬಯಸಿದನು ಆದರೆ ಜನರು ಅದಕ್ಕೆ ಅವಕಾಶವನ್ನು ಮಾಡಿ ಕೊಡಲ್ಲಿಲ್ಲ. ಅವನನ್ನು ಸುಮ್ಮನಿರುವಂತೆ ಗದರಿಸಿದರು.

8


ಬಾರ್ತಿಮಯನು ಯಾರ ಮಾತನ್ನು
ಕೇಳದ ಪುನ: ಹಾಗೆ ಮಾಡಿದನು.
9


ಯೇಸು ಅದನ್ನು ಕೇಳಿ ಅವನನ್ನು ತನ್ನ ಹತ್ತಿರ
ಕರೆದುಕೊಂಡು ಬನ್ನಿರಿ ಎಂದು ಅಪ್ಪಣೆಯನ್ನು
ಕೊಟ್ಟನು. ಶಿಷ್ಯರು ಬಂದು ಧೈರ್ಯವಾಗಿರು
ಯೇಸು ನಿನ್ನನ್ನು ಕರೆಯುತ್ತಾನೆ ಅಂದರು.
10


ಅವನಲ್ಲಿರುವಂತ ವಸ್ತ್ರವನ್ನು ಬೀಸಾಡಿ ಯೇಸುವಿನ ಬಳಿಗೆ ಹೋದನು.
11


ಯೇಸು ಅವನನ್ನು ನೋಡಿ ನಾನು ನಿನಗೇನು
ಮಾಡಬೇಕೆಂದು ಕೊರುತ್ತೀಯ ಅಂದನು? ಅವನ
ಉತ್ತರ ಏನಾಗಿತ್ತು? ಅವನಿಗೆ ಬೇಕಾಗಿದ್ದ ಹಣ,
ವಸ್ತ್ರ, ಒಳ್ಳೆಯ ಮನೆಯಾಗಿತ್ತಾ?
12


ಇಲ್ಲಾ! ಅವನು ಯೇಸುವಿನಿಂದ ಹಣ, ಬಂಗಾರ
ಮತ್ತು ಯಾವ ವಸ್ತ್ರವನ್ನು ಕೇಳಲಿಲ್ಲ.
13


ಅವನು ಏನನ್ನು ಕೇಳಿದನೆಂದು
ನಿಮಗೆ ಗೊತ್ತಾ?
14

ಬಾರ್ತಿಮಯನಿಗೆ ಬೇಕಾಗಿದ್ದು ಕಣ್ಣು. ಅವನು ಯೇಸುವನ್ನು ಮತ್ತು ಅವರು ಮಾಡಿದ ಸೃಷ್ಟಿಯನ್ನು ನೋಡಬೇಕಾಗಿತ್ತು. ಮತ್ತು ಅವನು ಬಿಕ್ಷೆ ಬೇಡುವದನ್ನು ಬಿಟ್ಟು ತನ್ನ ಮೇಲೆ ಕಾಳಜಿಯನ್ನು ಇಟ್ಟುಕೊಳ್ಳಲು ಬಯಸಿದನು.



15

ಯೇಸುವು ಬಾರ್ತಿಮಯನಿಗೆ ನಿನ್ನ ವಿಶ್ವಾಸದಂತೆ ನಿನಗಾಗಲಿ ಅಂದನು ಆತನಿಗೆ ಕಣ್ಣು ಬಂದಿತು.



16

ಆತನಿಗೆ ಕಣ್ಣು ಬಂದ ಕೂಡಲೆ ಯೇಸುವನ್ನು ಹಿಂಬಾಲಿಸಿದನು. ನೋಡುವವರೇಲ್ಲರು ಇದು ಆದ್ಬುತ, ಆತಿಶಯ ಎಂದರು. ಆ ಕ್ಷಣವು ಬಾರ್ತಿಮಯನಿಗೆ ಆದ್ಬುತ ಸಮಯವಾಗಿತ್ತು.



17

ನೋಡುವವರೇಲ್ಲರು ಇದು ಆದ್ಬುತ, ಆತಿಶಯ ಎಂದು ದೇವರನ್ನು ಕೊಂಡಾಡಿದರು. ಮತ್ತು ಕುರುಡನಿಗೆ ಕಣ್ಣು ಕೊಟ್ಟಂತಹ ಆತಿಶಯಯುಳ್ಳ ದೇವರ ಮಗನಾದ ಯೇಸುವನ್ನು ಕಂಡರು.



18

ಯೇಸುವು ಕುರುಡನನ್ನು ಗುಣ ಪಡಿಸಿದ್ದು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಮಾರ್ಕ 10, ಲೂಕ 18, ಯೋಹಾನ 9**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

**ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.**

**ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.**

**ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16**

**ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.**